


ವಿಜಯನಗರದ ರಾಜ ಶ್ರೀ ಕೃಷ್ಣದೇವರಾಯನ ದರಬಾರದಲ್ಲಿ ತೆನಾಲಿ ರಾಮಕೃಷ್ಣನಿದ್ದ. ತೆನಾಲಿ ರಾಮಕೃಷ್ಣನು ತನ್ನ ತೀಕ್ಷ್ಣ ಬುದ್ಧಿಶಕ್ತಿಯಿಂದ ಅನೇಕ ಪಂಡಿತರನ್ನು, ಪೈಲವಾನರನ್ನು, ಜಾದೂಗಾರರನ್ನು ಸೋಲಿಸಿದ ಕಥೆಗಳು ಮನರಂಜಿಸುತ್ತವೆ.

ಒಮ್ಮೆ ಶ್ರೀ ಕೃಷ್ಣದೇವರಾಯನ ಆಸ್ಥಾನಕ್ಕೆ ಬಂಗಾಲ ದೇಶದ ಒಬ್ಬ ಶ್ರೇಷ್ಠ ಜಾದೂಗಾರ ಬಂದಿದ್ದ. ಅವನು ತನ್ನ ಕೈಚಳಕದಿಂದ ಒಂದು ವ್ಯಕ್ತಿಯ ರುಂಡ–ಮುಂಡಗಳನ್ನು ಕತ್ತರಿಸಿ ತೋರಿಸಿದ. ಮತ್ತೆ ಜೋಡಿಸಿ ತೋರಿಸಿದ. ಒಂದು ಡಬ್ಬಿಯಲ್ಲಿ ಪಾರಿವಾಳ ಹಾಕಿದ. ಅದೇ ಡಬ್ಬಿಯಿಂದ ಗಿಳಿ, ಕೋಗಿಲೆ, ಕಾಗೆಗಳನ್ನು ತೆಗೆದು ತೋರಿಸಿದ. ಒಂದು ಖಾಲಿ ಬರಿದಾದ ತಂಬಿಗೆಯಿಂದ ಸತತ ನೀರು ಸುರಿಸಿದ. ಅದರಿಂದಲೇ ನೂರಾರು ಬೆಳ್ಳಿ ರೂಪಾಯಿ ನಾಣ್ಯಗಳು ಸುರಿಯುವುದನ್ನು ತೋರಿಸಿದ. ರಾಜ, ಮಂತ್ರಿ, ಸಭಾಸದರು ನೋಡಿ ಬೆರಗಾದರು. ಕೃಷ್ಣದೇವರಾಯನು ಮೆಚ್ಚಿ ಬೆಲೆಯುಳ್ಳ ಬಹುಮಾನ ನೀಡಿದ.

ಜಾದೂಗಾರನಿಗೆ ಅಹಂಕಾರವಿತ್ತು. ‘ನನ್ನಂತೆ ಜಾದೂ ಪ್ರಯೋಗ ಮಾಡುವವರು ಯಾರಾದರೂ ಮುಂದೆ ಬರಬೇಕು. ನನಗೆ ಮಾಡಲಾರದ ಜಾದೂ ಪ್ರಯೋಗ ಮಾಡಿ ತೋರಿಸಬೇಕು. ಅಂಥವರಿಗೆ ನಾನು ಸೋಲು ಒಪ್ಪಿಕೊಂಡು, ನನ್ನ ಈ ಬಹುಮಾನ ಕೊಡುತ್ತೇನೆ’ ಎಂದನು. ಯಾರೂ ಮುಂದೆ ಬರಲಿಲ್ಲ.

ತೆನಾಲಿ ರಾಮಕೃಷ್ಣ ಎದ್ದು ಮುಂದೆ ಬಂದ. ‘ಒಂದು ತಾಸಿನ ಸಮಯದ ನಂತರ ಜಾದೂ ಮಾಡಿತೋರಿಸುತ್ತೇನೆ’ ಎಂದ. ಅವನು ಮನೆಗೆ ಹೋಗಿ ಒಂದು ಡಬ್ಬಿ ತುಂಬ ಮಸಾಲೆ ಖಾರ ತಂದ. ಇನ್ನೊಂದು ಡಬ್ಬಿಯಲ್ಲಿ ಸೂಸು ಮಣ್ಣು ತಂದ. ಮತ್ತೊಂದು ಕಾಜಿನ ಬಾಟಲಿಯಲ್ಲಿ ಔಷಧ ತುಂಬಿ ತಂದ. ಅವನು ಜಾದೂಗಾರನನ್ನು ಕುರಿತು, ‘ಜಾದೂಗಾರರೆ, ನಾನು ಎರಡು ಕಣ್ಣುಗಳನ್ನು ಮುಚ್ಚಿಕೊಂಡು ಮಾಡಿದ್ದನ್ನು ನೀವು ಎರಡೂ ಕಣ್ಣುಗಳನ್ನು ತೆರೆದು ಮಾಡಿತೋರಿಸಬೇಕು. ಆಗಬಹುದೆ?’ ಎಂದು ಸವಾಲು ಹಾಕಿದ. ಜಾದೂಗಾರನು ಸುಲಭವಾಗಿ ಒಪ್ಪಿಕೊಂಡ.

ತೆನಾಲಿ ರಾಮಕೃಷ್ಣ ಎಲ್ಲರಿಗೆ ಕಾಣುವಂತೆ ನಿಂತ. ತನ್ನ ಎರಡೂ ಕಣ್ಣುಗಳನ್ನು ಮುಚ್ಚಿಕೊಂಡನು. ಮೊದಲು ಸೂಸು ಮಣ್ಣು, ನಂತರ ಖಾರಪುಡಿ ಸುರವಿಕೊಂಡನು. ಜೋರಿನಿಂದ ಕಣ್ಣುಗಳನ್ನು ತಿಕ್ಕಿಕೊಂಡನು. ನಂತರ ಬಾಟಲಿಯಲ್ಲಿಯ ಔಷಧ ಭಯಂಕರ ವಿಷವೆಂದು ಹೇಳಿದ. ಒಂದು ಹನಿ ಕಣ್ಣೊಳಗೆ ಹೋದರೆ, ಕಣ್ಣು ಕುರುಡು ಆಗುತ್ತದೆ ಎಂದು ಹೇಳಿದ. ಆ ಔಷಧವನ್ನು ಕಣ್ಣುಗಳನ್ನು ಮಚ್ಚಿ ಸುರುವಿಕೊಂಡನು. ಚೆನ್ನಾಗಿ ತಿಕ್ಕಿಕೊಂಡನು. ನಂತರ ತಾನು ಮಾಡಿದಂತೆ ಮಾಡಿ ತೋರಿಸಲು ಆಹ್ವಾನಿಸಿದನು.

ಜಾದೂಗಾರನಿಗೆ ದಿಕ್ಕೇ ತೋಚದಂತಾಯಿತು. ಕಣ್ಣುಗಳನ್ನು ತೆರೆದು ಸೂಸು ಮಣ್ಣು, ಖಾರ, ಭಯಂಕರ ವಿಷ ಸುರಿದುಕೊಂಡರೆ ಕಣ್ಣು ಹಾಳಾಗಿ ಹೋಗುತ್ತದೆ ಎಂದು ಅಂಜಿದ. ಸೋಲನ್ನು ಒಪ್ಪಿಕೊಂಡನು. ರಾಜ ಕೊಟ್ಟ ಬಹುಮಾನವನ್ನು ತೆನಾಲಿ ರಾಮಕೃಷ್ಣನಿಗೆ ಕೊಟ್ಟು ಮುಂದಿನ ರಾಜ್ಯಕ್ಕೆ ಪ್ರಯಾಣ ಬೆಳೆಸಿದನು.

**-ಅಣ್ಣಾಜಿ ಫಡತಾರೆ, ಮಹಾಲಿಂಗಪುರ**